# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 681
2) ಸದಸ್ಯರ ಹೆಸರು : ಡಾ|| ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸಬೇಕಾದ ದಿನಾಂಕ : 21-02-2024
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ನಗರದ ಹಳೆ ಬಂದರಿನಲ್ಲಿ ಮೀನುಗಾರರು ನಿಲ್ಲಿಸುವ ದೋಣಿಗಳ ಸಂಖ್ಯೆ ಎಷ್ಟು; | ಮಂಗಳೂರು ನಗರದ ಹಳೆ ಬಂದರಿನಲ್ಲಿ ಮೀನುಗಾರರು ನಿಲ್ಲಿಸುವ ದೋಣಿಗಳ ಸಂಖ್ಯೆ ಈ ಕೆಳಗಿನಂತಿದೆ.<br>**ದೋಣಿ ವಿಧ** / **ಸಂಖ್ಯೆ**<br>ಯಾಂತ್ರೀಕೃತ ದೋಣಿ / 1524<br>ಮೋಟಾರೀಕೃತ ದೋಣಿ / 1663<br>ಆಳಸಮುದ್ರ ಮೀನುಗಾರಿಕೆ ದೋಣಿ / 07 |
| ಆ) | ಸಾವಿರಾರು ದೋಣಿಗಳು ಸಾಯಂಕಾಲ ಹಿಡಿದ ಮೀನುಗಳನ್ನು ಮಾರಾಟ ಮಾಡಲು ಹಳೆ ಬಂದರಿಗೆ ದೋಣಿಗಳು ಬಂದಾಗ ಇಕ್ಕಟ್ಟಾಗಿ ನಿಲ್ಲುಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;; | ಹೌದು. |
| ಇ) | ಇಕ್ಕಟ್ಟಾದ ಸ್ಥಳದಿಂದ ದೋಣಿಗಳು ಒಂದಕ್ಕೊಂದು ತಗುಲಿ ಹಾನಿಯಾಗುತ್ತಿರುವುದರಿಂದ ಬಡ ಮೀನುಗಾರರಿಗೆ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಈ) | ಹಳೆ ಬಂದರಿನಲ್ಲಿ ಸ್ಥಳ ಸಿಗದೆ ಮೀನುಗಾರರು ರಸ್ತೆಗಳ ಬದಿಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡಿ ಬಡತನದಲ್ಲಿಯೇ ಜೀವನ ನಡೆಸುತ್ತಿದ್ದು, ಈ ಬಡ ಮೀನುಗಾರರ ಸಮಸ್ಯೆಗಳಿಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ಮಂಗಳೂರು ಬಂದರಿನಲ್ಲಿ ದೋಣಿಗಳ ನಿಲುಗಡೆಗೆ ಸ್ಥಳದ ಸಮಸ್ಯೆ ಇರುವುದರಿಂದ ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.<br>1) ಮಂಗಳೂರು ಬಂದರಿನಲ್ಲಿ ಪ್ರಸ್ತುತ 3ನೇ ಹಂತದ ರೂ.49.50 ಕೋಟಿಗಳ ಯೋಜನಾ ವೆಚ್ಚದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.<br>2) ಮಂಗಳೂರು ಕುಳಾಯಿಯಲ್ಲಿ ಮೀನುಗಾರಿಕೆ ಬಂದರು ನಿರ್ಮಿಸಲು ರೂ.196.75 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.<br>3) ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ Modernization of fishing harbour ರಡಿ ರೂ.37.50 ಕೋಟಿಗಳ ವೆಚ್ಚದ ಯೋಜನಾ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.<br>4) ಮಂಗಳೂರು ಬಂದರಿನ ಬೆಂಗ್ರೆ ಪ್ರದೇಶದಲ್ಲಿ ರೂ.3.37 ಕೋಟಿ ವೆಚ್ಚದಲ್ಲಿ 150 ದೋಣಿಗಳು ತಂಗಲು ನಾಡದೋಣಿ ತಂಗುದಾಣ ನಿರ್ಮಿಸಲಾಗಿದೆ.<br>ಇದರಿಂದ ದೋಣಿಗಳ ದಟ್ಟಣೆ ಸಮಸ್ಯೆಯನ್ನು ಹಂತಹಂತವಾಗಿ ನಿವಾರಿಸುವ ನಿಟ್ಟಿನಲ್ಲಿ ಕ್ರಮವಹಿಲಾಗುತ್ತಿದೆ. |

ಸಂಖ್ಯೆ: ಪಸಂಮೀ ಇ-53 ಮೀಇಯೋ 2024

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು